**ಸಾಕ್ಷಿಯನ್ನು ದಿಃ 10.01.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್ ವಿ ವಿ ವಕೀಲರಿಂದ.**

ನನಗೆ ಓದಲು ಬರೆಯಲು ಬರುವುದಿಲ್ಲ. ಕೆಂಪಮ್ಮ ನನಗೆ ಸಂಬಂಧದಲ್ಲಿ ಅಕ್ಕ ಆಗಬೇಕು. 2 ನೇ ಪ್ರತಿವಾದಿ ನನ್ನ ಸೋದರ ಅಳಿಯ . ಬಂಡಿಗೌಡನಪಾಳ್ಯದಿಂದ ಕೆಂಚನಹಳ್ಳಿ ಗ್ರಾಮ 30 ಅಡಿ ಅಂತರದಲ್ಲಿ ಇರುತ್ತದೆ. ನಾನು ಕೆಂಚನಹಳ್ಳಿ ಗ್ರಾಮದ ವಾಸಿಯಾಗಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲೂ ಅದನ್ನೇ ಬರೆಸಿರುತ್ತೇನೆ. ಸದರಿ ಎರಡೂ ಗ್ರಾಮಗಳು ತಾವರೇಕೆರೆ ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಬರುತ್ತವೆ ಎಂದರೆ ಸರಿ. ಬಂಡೀಗೌಡನ ಪಾಳ್ಯದ ಅಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಬಂಡೀಗೌಡನಪಾಳ್ಯ ಎಂದು ಮತ್ತು ಕೆಂಚನಹಳ್ಳಿ ಗ್ರಾಮದ ಅಸ್ತಿಗಳಿಗೆ ದಾಖಲೆಗಳಲ್ಲಿ ಕೆಂಚನಹಳ್ಳಿ ಗ್ರಾಮ ಎಂದು ಬರುತ್ತದೆ ಎಂದರೆ ಸರಿ. ವಾದಿಯು ಈ ದಾವೆಯನ್ನು ಯಾವ ಸರ್ವೇ ನಂಬರ್ ಮತ್ತು ಎಷ್ಟು ವಿಸ್ತೀರ್ಣದ ಆಸ್ತಿಗೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯಲ್ಲಿ ನಮೂದಿಸಿದ ಅಸ್ತಿಯು ಕೆಂಚನಹಳ್ಳಿ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ದಾವೆಯಲ್ಲಿ ವಾದಿಯು ಸಲ್ಲಿಸಿದ ದಾಖಲೆಗಳನ್ನು ನೋಡಿದ್ದೇನೆ ಸದರಿ ದಾಖಲೆಗಳಲ್ಲಿ ಬಂಡೀಗೌಡನಪಾಳ್ಯ ಎಂದು ನಮೂದು ಆಗಿದೆ ಎಂದು ನುಡಿಯುತ್ತಾರೆ.

ಈ ದಾವೆಯನ್ನು ವಾದಿಯು ಕೆಂಚನಹಳ್ಳಿ ಗ್ರಾಮದ ಸರ್ವೆ ನಂಬರ್ 10/6 , 5 ಗುಂಟೆ ಜಮೀನಿಗೆ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ಸದರಿ ಸ್ವತ್ತಿನಲ್ಲಿ 1 ಮನೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಮನೆಯು ಶಿವರಾಮಯ್ಯನವರಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ವಾದಿಯ ಗಂಡ ರಾಮಚಂದ್ರಯ್ಯನವರಿಗೆ ವಿಭಾಗದ ಮೂಲಕ ಬಂದಿತ್ತು ಎಂದರೆ ಸರಿ. ಸದರಿ ಜಮೀನಿನಲ್ಲಿ 5 ಗುಂಟೆ ಜಮೀನನ್ನು ರಾಮಚಂದ್ರಯ್ಯನವರು ವಾದಿಯ ತಂದೆ ದಾಸೇಗೌಡ ರವರಿಗೆ 1979 ರಲ್ಲಿ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 10/6 , 5 ಗುಂಟೆ ವಿಸ್ತೀರ್ಣ ಜಮೀನಿಗೆ ವಾದಿಯ ಹೆಸರಿನಲ್ಲಿ ಆರ್ ಟಿ ಸಿ ನಮೂದು ಇದೆ ಎಂದರೆ ಸರಿಯಲ್ಲ. ನಿಡಿ-3 ರಲ್ಲಿ ನಮೂದು ಆಗಿರುವ ಆಸ್ತಿಯು ಬಂಡೀಗೌಡನಪಾಳ್ಯಕ್ಕೆ ಸೇರಿರುತ್ತದೆ. ಸದರಿ ಅಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ನೋಡಿಲ್ಲ ಮನೆ ಇರುವುದನ್ನು

ನೋಡಿರುತ್ತೇನೆಂದು ನುಡಿಯುತ್ತಾರೆ. ನಿಡಿ-3 ರಲ್ಲಿ ಶಿವರಾಮಯ್ಯನವರು ಖರೀದಿ ಮಾಡಿದ ಅಸ್ತಿಯು ಕೆಂಚನಹಳ್ಳಿ ಗ್ರಾಮದ್ದು ಎಂದು ಬರೆಸಲಾಗಿದೆ ಎಂದರೆ ಅದನ್ನು ತಪ್ಪಾಗಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಆಸ್ತಿಯ ನಂಬರ್ ಮತ್ತು ವಿಸ್ತೀರ್ಣವನ್ನು ನಾನು ಹೇಳಿ ಬರೆಸಿಲ್ಲ, 2 ನೇ ಪ್ರತಿವಾದಿ ಬರೆಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ್ 10/6 ಮತ್ತು ಖಾನೇಶುಮಾರಿ ನಂಬರ್ 86 ಎರಡೂ ಒಂದೇ ಎಂದು ನಾನು ಹೇಳಿ ಬರೆಸಿಲ್ಲ. ಸರ್ವೆ ನಂಬರ್ 10/6 , 5 ಗುಂಟೆ ವಿಸ್ತೀರ್ಣದ ಜಮೀನು ಮತ್ತು ಮನೆಯು ವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ರಾಮಚಂದ್ರಯ್ಯನಿಗೆ ಯಾವುದೇ ಖಾನೇಷುಮಾರಿ ಅಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.